ಜನಮಾನಸದಲ್ಲಿ ಬೆರೆತು ಹೋಗಬೇಕೆಂದು ಲೋಹಿಯಾ ಬಯಸಿದ್ದರು.

ಲೋಹಿಯಾ ಬಳಸುತ್ತಿದ್ದ ಭಾಷೆಯಂತೆಯೇ ಅವರು ಎತ್ತುತ್ತಿದ್ದ ಪ್ರಶ್ನೆಗಳು ಕೂಡ ನೆಹರೂಗೆ ಕಿರಿಕಿರಿ ಉಂಟು ಮಾಡುತ್ತಿದ್ದವು! 1969ರ ಚುನಾವಣೆಯ ಕಾಲದಲ್ಲಿ ಲೋಹಿಯಾ ಎತ್ತಿದ್ದ ಸಾಮಾನ್ಯರ ದಿನನಿತ್ಯದ ವರಮಾನ ಮೂರಾಣೆ ಎಂಬ ಪ್ರಶ್ನೆ ಲೋಕಸಭೆಯಲ್ಲೂ ಸುಳಿಯಿತು. ಈ ಪ್ರಶ್ನೆ ಲೋಹಿಯಾ ಮನಸ್ಸಿನಲ್ಲಿ ರೂಪುಗೊಂಡ ಗಳಿಗೆ ಕುರಿತು ರಬಿರಾಯ್ ಬರೆಯುತ್ತಾರೆ:

ಹಳ್ಳಿಯೊಂದರಲ್ಲಿ ಕೊಳದಲ್ಲಿ ಮೀನು ಹಿಡಿಯುತ್ತಿದ್ದ ಹುಡುಗನನ್ನು ಲೋಹಿಯಾ ಕೇಳಿದರು: 'ನಿನ್ನ ಒಂದು ದಿನದ ಆದಾಯ ಎಷ್ಟು?'

'ಮೂರು, ಮೂರೂವರೆ ಆಣೆ' ಎಂದ ಹುಡುಗ.

ಅನಂತರ ಲೋಹಿಯಾ ಭಾರತದ ಸಾಮಾನ್ಯ ಜನರ ನಿತ್ಯದ ಆದಾಯದ ಬಗ್ಗೆ ವಿಸ್ತಾರವಾಗಿ ಅಧ್ಯಯನ ಮಾಡಿದರು. ಜನರ ತಲಾ ಆದಾಯದ ಬಗ್ಗೆ ಸರ್ಕಾರ ಕೊಡುತ್ತಿರುವ ಅಂಕಿ ಅಂಶಗಳು ಬೋಗಸ್ ಎಂಬುದನ್ನು ಅರಿತು, ಸರ್ಕಾರಕ್ಕೆ ಸವಾಲೆಸೆದರು:

ಲೋಹಿಯಾ: ಈ ದೇಶದ ಶೇಕಡ ಅರವತ್ತು ಜನ, ಅಂದರೆ ಇಪ್ಪತ್ತೇಳು ಕೋಟಿ ಜನ, ಹತ್ತೊಂಬತ್ತು ಪೈಸೆಯಲ್ಲಿ ಬದುಕಬೇಕಾಗಿದೆ. ಆದರೆ ಪ್ರಧಾನಮಂತ್ರಿಯವರ ದಿನದ ಖರ್ಚು ಇಪ್ಪತ್ತೈದು ಸಾವಿರ. ಬಿರ್ಲಾ ಖರ್ಚು ದಿನಕ್ಕೆ ಮೂರು ಸಾವಿರ.

ನೆಹರು: ನನ್ನ ಮಾಹಿತಿಯ ಪ್ರಕಾರ, ಜನರ ಪ್ರತಿದಿನದ ಸರಾಸರಿ ಆದಾಯ ಹದಿನೈದು ಆಣೆ. ಒಬ್ಬ ಎಕನಾಮಿಸ್ಟ್ ಕೊಟ್ಟಿರುವ ಹೇಳಿಕೆಯ ಪ್ರೂಫ್ ನನ್ನ ಬಳಿ ಇದೆ.

ಲೋಹಿಯಾ: ಯಾರು ಈ ನಿಮ್ಮ ಆ ಎಕನಾಮಿಸ್ಟ್?

ನೆಹರು: ಅದು ಯಾರೋ ಒಬ್ಬರ ಹೇಳಿಕೆ.

ಲೋಹಿಯಾ: ಓಕೆ. ಸಂಜೆ ಆ ಮಹಾಶಯರ ಬಳಿ ಮಾತಾಡೋಣ. ಆದರೆ ನೀವು ವಿಷಾದಪಡುತ್ತೀರಿ.

ನೆಹರು: ವಿಷಾದ?!

ಲೋಹಿಯಾ: ಕೃಷಿ ಹಾಗೂ ಕೈಗಾರಿಕೆಯ ಬಗ್ಗೆ ನಿಮ್ಮ ತಿಳಿವಳಿಕೆ ತೀರಾ ಸೀಮಿತವಾದುದು.

ನೆಹರು ಆ ಸಂಜೆ ಸದರಿ ಆರ್ಥಿಕ ತಜ್ಞರನ್ನು ಕರೆದರು. ಆ ತಜ್ಞರು ಹಿಂದೆ ಕೊಟ್ಟ ಅಂಕಿ ಅಂಶ ತಪ್ಪೆಂದು ಗೊತ್ತಾಯಿತು. ಮಾರನೆಯ ದಿನ ಯೋಜನಾ ಆಯೋಗದ ಮಂತ್ರಿ ನಂದಾ, ಹಿಂದಿನ ದಿನದ ನೆಹರು ಹೇಳಿಕೆಗೆ ತಿದ್ದುಪಡಿ ಪ್ರಕಟಿಸಿದರು: 'ಜನರ ದೈನಂದಿನ ಆದಾಯ ಏಳೂವರೆ ಆಣೆ.'

ಲೋಹಿಯಾ ಎತ್ತಿದ ಈ ಪ್ರಶ್ನೆ ಆಡಳಿತ ಪಕ್ಷದ ಸದಸ್ಯರನ್ನು ಕೆರಳಿಸಿತು. 'ಬರೀ ಇಪ್ಪತ್ತೈದು ಸಾವಿರ ಏನು, ನಾವು ಒಂದು ಕೋಟಿ ಖರ್ಚು ಮಾಡುತ್ತೇವೆ' ಎಂದು ಕೆಲವರು ಕೂಗಾಡಿದರು. ಆದರೆ ಪ್ರಧಾನಮಂತ್ರಿಯವರ ಸಂಬಳ, ಮನೆ ಖರ್ಚು, ಓಡಾಟ, ಭದ್ರತೆ, ಪ್ರವಾಸ ಎಲ್ಲವನ್ನೂ ಲೆಕ್ಕ ಹಾಕಿ ಲೋಹಿಯಾ ಕೊಟ್ಟ ಅಂದಾಜು ಸರಿಯಾಗಿತ್ತು. ಅದೊಂದು ನೈತಿಕ ಪ್ರಶ್ನೆಯೂ ಆಗಿತ್ತು.

ಮಂತ್ರಿಗಳನ್ನು ಅಧಿಕಾರಿಗಳು ಕುಣಿಸುವುದನ್ನು ನೋಡಿದ್ದ ಲೋಹಿಯಾ ಚರ್ಚೆಯೊಂದರಲ್ಲಿ ಹೇಳಿದರು:

'ಮಂತ್ರಿಗಳಿಗೆ ಕೃಷಿ, ಕೈಗಾರಿಕೆ, ರಾಷ್ಟ್ರೀಯ ವರಮಾನ ಮುಂತಾದವುಗಳ ಬಗ್ಗೆ ಹೆಚ್ಚು ತಿಳಿವಳಿಕೆ ಇಲ್ಲ. ಮಂತ್ರಿಗಳು ತಜ್ಞರ ಶಿಫಾರಸ್ಸುಗಳನ್ನು ಕಣ್ಣು ಮುಚ್ಚಿ ಅನುಸರಿಸುವುದನ್ನು ಬಿಟ್ಟು ಸ್ವಂತ ತಲೆ ಉಪಯೋಗಿಸಬೇಕು. ಶಿಫಾರಸ್ಸುಗಳ ಬಗ್ಗೆ ಯೋಚಿಸಿ ಆದೇಶ ಕೊಡಬೇಕು; ಕಾರಣ, ಸಂಖ್ಯಾಶಾಸ್ತ್ರಜ್ಞರು ಮತ್ತು ಆರ್ಥಿಕ ತಜ್ಞರು ಹಾವಾಡಿಗರ ಪುಂಗಿಯ ನಾದಕ್ಕೆ ನರ್ತಿಸುವ ವಿಷದ ಹಾವುಗಳಿದ್ದಂತೆ. ನೀವು ಕೊಳಲು ಬಾರಿಸಲು ಕಲಿಯದಿದ್ದರೆ ಫಲಿತಾಂಶಗಳು ಭೀಕರವಾಗಿರಬಲ್ಲವು.'

ಭ್ರಷ್ಟಾಚಾರ ತಡೆಗಟ್ಟಲು ಸರ್ಕಾರ ಅಧಿವೇಶನದಲ್ಲಿ 'ಸೆಂಟ್ರಲ್ ವಿಜಿಲೆನ್ಸ್ ಕಮಿಷನ್' (ಸಿ.ವಿ.ಸಿ.) ಪ್ರಸ್ತಾವ ಮುಂದಿಟ್ಟಾಗ ಲೋಹಿಯಾ ಹೇಳಿದರು:

'ಹಾಗೆಂದರೇನು? ಸಿ.ವಿ.ಸಿ. ಭ್ರಷ್ಟಾಚಾರವನ್ನು ಗುರುತಿಸುತ್ತದೆ; ಭ್ರಷ್ಟಾಚಾರವನ್ನು ಮಟ್ಟ ಹಾಕುತ್ತದೆ. ಇದು ಚಿಕಿತ್ಸೆಯಿರಬಹುದು. ಇದು ಈಗಾಗಲೇ ನಡೆದಿರುವ ಅಪರಾಧಕ್ಕೆ ಶಿಕ್ಷೆ. ಆದರೆ ಭ್ರಷ್ಟಾಚಾರವನ್ನು ತಡೆಯುವ ಯಾವ ವಿಧಾನದ ಬಗೆಗೂ ಸರ್ಕಾರ ಚಿಂತಿಸಿಲ್ಲ... ಆದ್ದರಿಂದ ಸಿ.ವಿ.ಸಿ. ವಿಫಲವಾಗುತ್ತದೆ. ಕಾರಣ, ಒಬ್ಬ ಪ್ರಭಾವಶಾಲಿ ಇದರ ಬಲೆಗೆ ಸಿಕ್ಕಿಕೊಂಡರೆ, ಅವನು ಬಲೆಯಿಂದ ತಪ್ಪಿಸಿಕೊಳ್ಳುತ್ತಾನೆ. ಸಾಧಾರಣ ಮನುಷ್ಯರು ಸಿಕ್ಕಿಕೊಳ್ಳುತ್ತಾರೆ...

ಮಾನ್ಯ ಗೃಹಮಂತ್ರಿಗಳು 'ಸಂತರು ಹಾಗೂ ಸಾಮಾಜಿಕ ಸಂಘಟನೆಗಳ ನಾಯಕರು ಸಾರ್ವಜನಿಕ ಅಭಿಪ್ರಾಯ ಮೂಡಿಸಿ ಭ್ರಷ್ಟಾಚಾರದ ಕೇಡನ್ನು ಹೊಡೆದೋಡಿಸಬೇಕು' ಎಂದು ಹೇಳಿದರು. ನೈತಿಕತೆ ಎಂದರೇನು? ಅದು ಸಂತರಿಗಷ್ಟೇ ಸಂಬಂಧಿಸಿರಬೇಕೆ? ಈ ಕಾಲದ ರಾಜಕಾರಣ ಮತ್ತು ಆರ್ಥಿಕತೆ ಎಷ್ಟು ಸಂಕೀರ್ಣವಾಗಿವೆಯೆಂದರೆ, ಜನ ಪ್ರಾಮಾಣಿಕರಾಗಿರಬೇಕೆಂದು ಸಂತರು ಪ್ರವಚನ ಕೊಟ್ಟ ಮಾತ್ರಕ್ಕೇ ಎಲ್ಲವೂ ಸರಿ ಹೋಗುವುದಿಲ್ಲ.'

ಸಿ.ವಿ.ಸಿ.ಯ ಅಡಿ ಪ್ರಧಾನಮಂತ್ರಿಯಿಂದ ಹಿಡಿದು ಎಲ್ಲರೂ ಬರಬೇಕು ಎಂದ ಲೋಹಿಯಾ, ಭಾರತದಲ್ಲಿ ಕಾಣುವ ಭ್ರಷ್ಟಾಚಾರದ ಲಜ್ಜೆಗೇಡಿತನವನ್ನು ಬಯಲು ಮಾಡಿದರು:

'ನೆರೆ ರಾಷ್ಟ್ರದ ಪ್ರಧಾನಮಂತ್ರಿಯೊಬ್ಬರ ವಿಚಾರ ಹೇಳುತ್ತೇನೆ. ನನಗೆ ಗೊತ್ತಿದ್ದಂತೆ ಆತ ಸಜ್ಜನ. ಆದರೆ ಆತನ ಪತ್ನಿ ನ್ಯಾಯವಿರುದ್ಧವಾದ ವ್ಯಾಪಾರ ನಡೆಸುತ್ತಿದ್ದಳು. ಈಗ ಆತ ಪ್ರಧಾನಮಂತ್ರಿ ಹುದ್ದೆಯಲ್ಲಿಲ್ಲ...

'...ಒಂದು ವೇಳೆ ಒಬ್ಬ ಮಂತ್ರಿ, 'ತಾನು ಹಣ ತೆಗೆದುಕೊಳ್ಳುವುದಿಲ್ಲ; ತನ್ನ ಸಂಬಂಧಿಗಳು ಹಣ ಸಂಗ್ರಹಿಸುತ್ತಾರೆ, ತಾನು ಅದನ್ನು ಪಕ್ಷಕ್ಕೆ ಕೊಡುತ್ತೇನೆ; ಆದ್ದರಿಂದ ತಾನೊಬ್ಬ ಸಂತ ಎಂದುಕೊಳ್ಳುತ್ತಾನೆ' ಎಂದಿಟ್ಟುಕೊಳ್ಳಿ. ಅವನ ಮನಸ್ಸು ಸತ್ಯವನ್ನು ಕಾಣದಾಗುತ್ತದೆ. ತಾನು ಭ್ರಷ್ಟಾಚಾರದಲ್ಲಿ ಭಾಗಿಯಾಗಿಲ್ಲ; ಸರಳವಾಗಿ ಬದುಕುತ್ತಿದ್ದೇನೆ ಎಂದು ತಿಳಿಯಲಾರಂಭಿಸುತ್ತಾನೆ. ಆದರೆ ಈತ ಆಡಂಬರದ ಬದುಕನ್ನು ಬದುಕುತ್ತಿರುವ ಮಂತ್ರಿಗಿಂತ ಹೆಚ್ಚು ಭ್ರಷ್ಟನಾಗುತ್ತಾನೆ.

'...ಇಲ್ಲಿ ಎಲ್ಲವೂ ಎಷ್ಟು ಕೃತಕವಾಗತೊಡಗಿದೆಯೆಂದರೆ, ಇದರಲ್ಲಿ

